ಒಂದೊಂದು ಸಾರಿ ತೊಳೆಯದೆ ಟೀವಿ ಮುಂದೆ ಕುಳಿತುಬಿಡುತ್ತಿದ್ದಳು. ಈಗಿರುವ ಬ್ಲಾಕ್ ಅಂಡ್ ವೈಟ್ ಟೀವಿ ಮಾರಿ, ಒಂದು ಕಲರ್ ಟೀವಿ ತರಲು ಒಂದು ರಾತ್ರಿ ತಂಗ್ಯನನ್ನು ಗಟ್ಟಿಯಾಗಿ ತಬ್ಬಿಕೊಂಡು ಹೇಳಿದ್ದಳು. ಅವಳು ಬಲವಾಗಿ ತಬ್ಬಿದ್ದರಿಂದಲೂ, ಹತ್ತಿರ ಹತ್ತಿರ ಇಪ್ಪತ್ತು ಸಾವಿರವಾಗುವ ಕಲರ್ ಟೀವಿಯ ಸುದ್ದಿ ಎತ್ತಿದ್ದರಿಂದಲೂ ತಂಗ್ಯನಿಗೆ ಉಸಿರು ಕಟ್ಟಿದಂತಾಗಿ ವಿಲವಿಲ ಒದ್ದಾಡಿಹೋದ. ''ಈಗೆಲ್ಲೈತೆ ಆಪಾಟಿ ದುಡ್ಡು, ಮುಂದೆ ಆಲೆಮನೆ ಆದಾಗ ನೋಡ್ಕಂಬಾನ. ಆ ಸುದ್ದಿ ಎತ್ತಿದ್ರೆ ನಮ್ಮಮ್ಮ ನನ್ನ ಸುಮ್ಕೆ ಬಿಡಲ್ಲ'' ಎಂದು ದೃಢವಾಗಿ ಹೇಳಿದ್ದ. ಅವನ ಮಾತಿನಿಂದ ಮುನಿಸಿಕೊಂಡು ಅವನ ಕಡೆ ಬೆನ್ನು ತಿರುಗಿಸಿ ಮಲಗಿದಳು ನಿರ್ಮಲ. ಮಾರನೆಯ ದಿನ ನಿರ್ಮಲ ಸರಿಯಾಗಿ ತಿಂಡಿ ತಿನ್ನದೆ ತಲೆ ನೋಯುತ್ತದೆ ಎಂದು ಮಲಗಿದಳು. ಆದರೆ, ಫೋನಿನಲ್ಲಿ ಮಾತನಾಡುವುದು, ಮೆಸೇಜ್ ಮಾಡುವುದೂ ಮಾಡುತ್ತಿದ್ದಳು. ಇದಾದ ಎರಡು ದಿನಕ್ಕೆ ತುಮಕೂರಿನಿಂದ ನಿರ್ಮಲಳ ಅಕ್ಕ ಭಾವ ಕಾರಿನಲ್ಲಿ ಬಂದಿಳಿದಿದ್ದರು. ಜೊತೆಯಲ್ಲಿ ಇಪ್ಪತ್ತೊಂದಿಂಚಿನ ಕಲರ್ ಟೀವಿಯೂ ಇಳಿದಿತ್ತು. ಅದಕ್ಕೊಂದು ಸ್ಟ್ಯಾಂಡನ್ನೂ ತಂದಿದ್ದರು. ಸ್ವತಃ ಭಾವನೇ ಟೀವಿ ಫಿಕ್ಸ್ ಮಾಡಿದ್ದನಲ್ಲದೆ, ಫೋನ್ ಮಾಡಿ ಒಂದು ವರ್ಷ ಪೂರ್ತಿ ಎಲ್ಲಾ ಚಾನೆಲ್‌ಗಳು ಬರುವಂತೆ ಕೇಬಲ್ ರೀಚಾರ್ಜ್ ಮಾಡಿಸಿದ್ದನು. ಅಕ್ಕ ಭಾವ ಕಾಫಿಯನ್ನು ಕೂಡಾ ಕುಡಿಯದೆ ಹೊರಟು ಬಿಟ್ಟರು. ''ಉಂಡೋಗಿವ್ರಂತೆ ಇರ್ರಿ ಬಾಡು ತರ್ತೀನಿ.'' ಎಂದು ತಂಗ್ಯ ಹೇಳಿದ್ದ. ಆದರೆ, ನಿರ್ಮಲ, ''ಅವರು ಯಾಪಾರಸ್ಥರು, ಬಿಡುವಿರಲ್ಲ. ನಿಮ್ಮ ಬಾಡ್ಗೇನು ಬರಗೆಟ್ಟು ಬಂದಿಲ್ಲ ಅವ್ರು.'' ಎಂದು ತಂಗ್ಯನ ಮಾತನ್ನು ತೆಗೆದುಹಾಕಿದ್ದಳು. ಅಕ್ಕ, ''ಗಂಡನಿಗೆ ಹಂಗೆಲ್ಲ ಮಾತಾಡಬಾರದು.'' ಎಂದು ಬುದ್ಧಿವಾದ ಹೇಳಿದ್ದಳು. ಇದಾದ ವಾರದ ಮೇಲೆ, ''ನಂಗೆ ಯಾಕೊ ಬೇಜಾರಾಗ್ತದೆ, ಎರಡು ದಿನ ಅಕ್ಕನ ಮನೆಯಲ್ಲಿ ಇದ್ದು ಬರ್ತೀನಿ.'' ಎಂದು ತುಮಕೂರಿಗೆ ಹೋಗಿ ಎರಡು ದಿನ ಇದ್ದು ಬಂದಿದ್ದಳು. ಮತ್ತೆರಡು ವಾರದಲ್ಲಿ ತೌರಿಗೆ ಹೋಗಿ ಎರಡು ದಿನ ಇದ್ದು ಬಂದಿದ್ದಳು. ಯಾಕೊ ತಂಗ್ಯನಿಗೆ ಹೆಂಡತಿ ಇಲ್ಲದ ಟೈಮೇ ನೆಮ್ಮದಿಯಾಗಿ ಕಾಣತೊಡಗಿತ್ತು.

